# ಮತ್ತೆ ಮತ್ತೆ ಆ್ಯಂಟಿಕ್ ಒಡವೆ

ಆ್ಯಂಟಿಕ್ ಒಡವೆ ಮ್ಯಾಟ್ ಫಿನಿಶಿಂಗ್ ಹೊಂದಿದ್ದು, ಮತ್ತೆ ಫ್ಯಾಷನ್ ಟ್ರೆಂಡ್ ಆಗಿದೆ. ಮದುಮಗಳ ಅಲಂಕಾರದಿಂದ ಹಿಡಿದು ಅದ್ದೂರಿ ರೇಷ್ಮೆ ಸೀರೆ ತೊಟ್ಟ ಮಹಿಳೆಯವರೆಗೆ ಎಲ್ಲರನ್ನೂ ಸೆಳೆಯುತ್ತಿದೆ ಈ ಒಡವೆ.

■ ಉಮಾ ಅನಂತ್

ಚಿತ್ರಕೃಪೆ: ಖಂಡಾಲ ಜ್ಯುವೆಲ್ಲರಿ ಬೆಂಗಳೂರು



ಹೊಳೆಹೊಳೆವ ಆಭರಣ, ಮಿಂಚಿ ಮಿನುಗುವ ಚಿನ್ನದ ಒಡವೆ ಎಂದರೆ ಎಂದಿಗೂ ಮಹಿಳೆಯರ ಅಚ್ಚುಮೆಚ್ಚು. ಅದರಲ್ಲೂ ಆ್ಯಂಟಿಕ್ ಜ್ಯುವೆಲ್ಲರಿ, ಎಂದರೆ ಪುರಾತನ ಕಾಲದ ಆಭರಣ ಮತ್ತೆ ಫ್ಯಾಷನ್ ಟ್ರೆಂಡ್ ಆಗಿದೆ. ಅಜ್ಜಿಯರ ಕಾಲದ ಒಡವೆ ಒಂದೇ ಒಂದು ಧರಿಸಿದರೂ ಅದು ಸಖತ್ ಲುಕ್ ಕೊಡುತ್ತದೆ. ಒಡವೆಗಳಲ್ಲಿ ಥರಾವರಿ ವಿನ್ಯಾಸದವು ಇದ್ದರೂ ಆ್ಯಂಟಿಕ್ ಒಡವೆಗಳು ಮಹಿಳೆಯರ ಮನಸೆಳೆಯುವ ವಿಧಾನವೇ ವಿಭಿನ್ನ.

ಹಿಂದೆಲ್ಲಾ ಆ್ಯಂಟಿಕ್ ಒಡವೆ ಎಂದರೆ ಅದು ವಯಸ್ಸಾದವರಿಗೇ ಸೀಮಿತ ಎಂಬ ಭಾವನೆ ಹಲವರಲ್ಲಿತ್ತು. ಆದರೆ ಫ್ಯಾಷನ್ ಪ್ರಪಂಚದಲ್ಲಿ ಇದೀಗ ಆ್ಯಂಟಿಕ್ ಆಭರಣದ್ದೇ ಸದ್ದು. ಏಕೆಂದರೆ ಆ್ಯಂಟಿಕ್ ಹಾರ, ಕಿವಿಯೋಲೆ, ಬ್ರೇಸ್ಲೆಟ್, ಉಂಗುರ, ಒಡ್ಯಾಣ ಎಲ್ಲವೂ ಆ್ಯಂಟಿಕ್‌ನದ್ದೇ ಆಗಿದ್ದರೆ ಅದು ಚೆನ್ನಾಗಿ ಕಾಣುತ್ತದೆ. ಆ್ಯಂಟಿಕ್‌ನಿಂದ ಮಾಡಿದ ಕತ್ತಿನ ಹಾರವಂತೂ ಮದುವೆ ಮುಂಜಿಗಳಂತಹ ಶುಭ ಸಮಾರಂಭಕ್ಕೆ ಹೇಳಿ ಮಾಡಿಸಿದಂತಿರುತ್ತದೆ. ಭರ್ಜರಿ ರೇಷ್ಮೆ ಸೀರೆ ಉಟ್ಟಾಗ ಒಂದೇ ಒಂದು ಆ್ಯಂಟಿಕ್ ಹಾರ ಧರಿಸಿದರೆ ಮತ್ತೆ ಯಾವ ಆಭರಣವೂ ಬೇಡ. ಕಾಂಜೀವರಂ, ಧರ್ಮಾವರಂ, ಬನಾರಸ್ ಸೀರೆಗಳಂತಹ ಭರ್ಜರಿ ಪಲ್ಲು, ಸೆರಗು ಇರುವ ಸೀರೆ ಉಟ್ಟಾಗ ಆ್ಯಂಟಿಕ್ ಒಡವೆ ವಿಜೃಂಭಿಸುತ್ತದೆ. ಇಂತಹ ಸೀರೆಗಳಿಗೆ ಉದ್ದನೆಯ ಹಾರವನ್ನಾದರೂ ಧರಿಸಬಹುದು, ಒಂದೇ ಒಂದು ನೆಕ್ಲೇಸ್ ಆದರೂ ತೊಡಬಹುದು ಇಲ್ಲವೇ ಎರಡು ಅಥವಾ ನಾಲ್ಕೆಳೆ ಸರವನ್ನೂ ಹಾಕಿಕೊಳ್ಳಬಹುದು.

‘ಆ್ಯಂಟಿಕ್ ಉಂಗುರಗಳು, ಜುಮುಕಿಗಳನ್ನು ಸಾಮಾನ್ಯವಾಗಿ ಎಲ್ಲ ಮಹಿಳೆಯರೂ ಇಷ್ಟಪಡುತ್ತಾರೆ. ಸಿಂಹ, ಹುಲಿಯಂತಹ ಕಾಡುಪ್ರಾಣಿಗಳು, ನವಿಲು, ಗಿಣಿಯಂತಹ ಪಕ್ಷಿಗಳು, ಗುಲಾಬಿ, ಮಲ್ಲಿಗೆ, ಸಂಪಿಗೆಯಂತಹ ಹೂವುಗಳು, ಅಷ್ಟೇ ಏಕೆ, ದೇವಾನುದೇವತೆಗಳ ಪರಿಕಲ್ಪನೆಯ